ಕರ್ನಾಟಕ ವಿಧಾನಮಂಡಲ ಗ್ರಂಥಾಲಯ
Entered No .....
Date .....

SHORT NOTICE QUESTION AND ANSWER

Starting of Agro-Engineering Diploma Course at Raichur

6. Sri M. NAGAPPA (Raichur):—

Will the Minister for Agriculture be pleased to state:—

(*a*) whether the Government has appointed a Commission to find out the Physical facilities available for starting 1st year Agro-Engineering Diploma Course at Raichur from 1969-70;

(*b*) whether the Commission has submitted its report if so, the action taken by the Government on the said Report;

(*c*) whether there is any proposal to postpone the starting of the first year's course at the Agricultural College at Hebbal from 19th August 1969 till a decision is taken by Government in this behalf ?

Sri B. RACHAIAH (Minister for Agriculture).—

(*a*) Yes.

(*b*) Yes; It has been decided that the First year course should be started at the Agricultural Engineering Institute at Raichur during 1969-70 itself and to start the course in October 1969.

(*c*) In view of reply to clause (*b*) this does not arise.

ಶ್ರೀ ಎಂ. ನಾಗಪ್ಪ.—ಅಕ್ಟೋಬರಿನಲ್ಲಿ ಪ್ರಥಮ ವರ್ಷದ ವ್ಯಾಸಂಗ ಕ್ರಮವನ್ನು ಪ್ರಾರಂಭಿಸ ಬೇಕೆಂದು ತೀರ್ಮಾನಿಸಲಾಗಿದೆ ಎಂದು ಉತ್ತರದಲ್ಲಿದೆ. ತಾರೀಖು ಗೊತ್ತುಮಾಡಿದೆಯೇ ? ಮಾಡಿದ್ದರೆ ಯಾವುದು ?

ಶ್ರೀ ಬಿ. ರಾಚಯ್ಯ.—ಅಕ್ಟೋಬರ್ ಎರಡರಿಂದ ಪ್ರಾರಂಭಿಸಬೇಕೆಂದು ಸೂಚಿಸಲಾಗಿದೆ.

ಶ್ರೀ ಎಂ. ನಾಗಪ್ಪ.—ತಾವು ಡಿಪ್ಲೊಮಾ ಕೋರ್ಸನ್ನು ಪ್ರಾರಂಭಿಸಲು ತೀರ್ಮಾನ ಮಾಡಿದ್ದೀರಿ. ಹಿಂದೆ ಶ್ರೀ ನಿಜಲಿಂಗಪ್ಪನವರು ಅಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸ ಬೇಕೆಂಬ ಅಭಿಪ್ರಾಯವಿತ್ತೆಂದು ಹೇಳಿದ್ದರು. ಈಗ ಇನ್‌ಸ್ಟಿಟ್ಯೂಟ್ ಎಂದು ಬದಲಾಯಿಸಲು ಕಾರಣವೇನು ? ಮುಂದೆ ಇನ್‌ಸ್ಟಿಟ್ಯೂಟನ್ನು ಕಾಲೇಜಾಗಿ ಪರಿವರ್ತನೆ ಮಾಡುವ ಉದ್ದೇಶ ವೇನಾದರೂ ಸರಕಾರಕ್ಕಿದೆಯೇ ?

Sri B. RACHIAH.—I require notice for that with regard to upgrading the present institution, it is under consideration of the University.

ಶ್ರೀ ನದಾಶಿವಪ್ಪ ಪಾಟೀಲ್.—ಮೊದಲು ಈ ಮನೆಯಲ್ಲಿ ಅಥವ ಹೊರಗಡೆ ಇಂಜಿನಿಯರಿಂಗ್ ಕಾಲೇಜನ್ನು ಕೊಡುವುದಾಗಿ ಭರವಸೆ ಕೊಚ್ಚಿದ್ದರು. ನಂತರ ಹೆಬ್ಬಾಳದಲ್ಲಿ ಮಾಡ ಬೇಕೆಂದು ಹೇಳುತ್ತಿದ್ದರು. ಇದರಲ್ಲಿ ರಾಜಕೀಯವಿತ್ತು. ರಾಯಚೂರಿನ ಜನರು ಅಥವ ಮುನಿಸಿ ಪಾಲಿಟಿಯವರು ಮನವಿ ಸಲ್ಲಿಸಿ ತಾವು ಕೆಲವು ಸಹಾಯಗಳನ್ನು ಒದಗಿಸುವುದಾಗಿ ಹೇಳಿದಮೇಲೆ ಒಂದು ನಿರ್ಧಾರಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಇದರಲ್ಲಿ ರಾಜಕೀಯವೇನೂ ಇಲ್ಲ. ಗೊಂದಲ ಮಾಡಿದರೆ ಸರ್ಕಾರ ಬಗ್ಗುವುದಿಲ್ಲ. ರಾಯಚೂರಿನಲ್ಲಿ ಈ ವರ್ಷ ಪ್ರಾರಂಭಿಸುವುದಕ್ಕೆ ಬೇಕಾದ ಕಟ್ಟಡ, ಲ್ಯಾಬೊರೇಟರಿ, ಹಾಸ್ಟೆಲ್ಲಿನ ಅನುಕೂಲತೆ ಎಗ್ಗೈರೆ ಇರಲಿಲ್ಲ. ಆದುದರಿಂದ ಕೃಷಿ ವಿಶ್ವವಿದ್ಯಾನಿಲಯದವರು ಒಪ್ಪಿರಲಿಲ್ಲ. ನಂತರ ರಾಯಚೂರಿನವರು ಪಾಲಿಟೆಕ್ನಿಕ್ ಇದೆ, ಎಂ ಎ ಡಿ ಕಾಲೇಜಿನ ಕಟ್ಟಡ ಇದೆ, ಹಾಸ್ಟೆಲ್ ಮುಂತಾದ ಅನುಕೂಲ ಕಲ್ಪಿಸುತ್ತೇವೆ ಎಂದು ಹೇಳಿದಮೇಲೆ ಈ ವರ್ಷ ತರಗತಿಗಳು ಪ್ರಯತ್ನ ನಡೆದಿದೆ.

ಶ್ರೀ ಎಸ್. ಬಂಗಾರಪ್ಪ.—ಯಾವುದೇ ಡಿಪ್ಲೋಮಾ ಕೋರ್ಸ್ ಅಥವ ಕಾಲೇಜು ಜೂನ್ ಜುಲೈನಲ್ಲಿ ಪ್ರಾರಂಭವಾಗುವುದು. ಹಾಗಿರುವಾಗ ಇದನ್ನು ಅಕ್ಟೋಬರಿನಲ್ಲಿ ಪ್ರಾರಂಭಿಸಲು ಕಾರಣವೇನು ?

ಶ್ರೀ ಬಿ. ರಾಚಯ್ಯ.—ಮೊದಲು ಹೆಬ್ಬಾಳದಲ್ಲಿ ಪ್ರಾರಂಭಿಸಬೇಕೆಂದು ತೀರ್ಮಾನವಾಗಿತ್ತು. ನಂತರ ರಾಯಚೂರಿನವರು ಅದನ್ನು ವಿರೋಧಮಾಡಿದಮೇಲೆ ನಾವು ಒಪ್ಪಿದೆವು. ಈಗ ಆಗಸ್ಟ್ ತಿಂಗಳು. ಇನ್ನು ಒಂದೂವರೆ ತಿಂಗಳೊಳಗೆ ಪ್ರಾರಂಭವಾಗುವುದು. ಸೌಕರ್ಯವಿಲ್ಲದಿರುವುದರಿಂದ ಮುಂದಿನವರ್ಷ ಪ್ರಾರಂಭಿಸಬೇಕೆಂದು ಕೃಷಿ ವಿಶ್ವವಿದ್ಯಾನಿಲಯದವರು ಹೇಳಿದಮೇಲೆ ಮಾಡುವುದನ್ನು ನಿಲ್ಲಿಸಲಾಗಿತ್ತು. ಆದರೆ ಅಲ್ಲಿನ ಜನರು ಬಂದು ಇಂಥ ಕಡೆ ಪಾಲಿಟೆಕ್ನಿಕ್ ಕಟ್ಟಡ ಖಾಲಿ ಇವೆ ಎಲ್ ವಿ ಡಿ ಕಾಲೇಜಿಗೆ ಹಾಸ್ಟೆಲಿನ ಅನುಕೂಲವಿದೆ ಮಂಜೂರುಮಾಡಿ ಸಹಾಯ ಮಾಡಬೇಕು ಎಂದು ಹೇಳಿದಾಗ ಮುಂದಿನ ವರ್ಷ ಪ್ರಾರಂಭಿಸುವುದಕ್ಕೆ ಬದಲಾಗಿ ಈ ವರ್ಷ ಮಾಡುವುದಾಗಿ ತೀರ್ಮಾನ ಮಾಡಲಾಯಿತು. ಅಲ್ಲದೆ ಹಾಗೆ ಮಾಡದಿದ್ದರೆ ಐ ಸಿ ಆರ್ ನಿಂದ ಹೆಚ್ಚು ಸಹಾಯ ದೊರೆಯುವುದಿಲ್ಲ ಎಂಬುದನ್ನೂ ಗಮನಿಸಿ 2 ತಿಂಗಳೂ ತಡವಾದರೂ ಈ ವರ್ಷವೇ ಮಾಡಬೇಕೆಂದು ತೀರ್ಮಾನಿಸಲಾಯಿತು.

ಶ್ರೀ ಎ. ಎನ್. ಪಾಟೀಲ್.—ರಾಯಚೂರು ಜಿಲ್ಲೆಯ ಜನರಲ್ಲಿ ಸಾಕಾದಷ್ಟು ಎಂಥೂಸಿಯಾಸಂ ಇದ್ದು, ಸಾಕಾದಷ್ಟು ದುಡ್ಡೂ ಕೂಡ ಕರೆಕ್ಟ್ ಮಾಡಿ ಕೊಟ್ಟು ಇನ್ನೂ ಕೊಡುತ್ತೇವೆ ಎಂದು ಎನ್‌ಥೂಸಿಯಾಸಂ ತೋರಿಸಿದ್ದರೂ ಮತ್ತು ಅಲ್ಲಿ ಒಳ್ಳೆಯ ಕ್ಯಾಲಿಟಿ ಲ್ಯಾಂಡ್ ಬ್ಲಾಕ್ ಕಾಟನ್ ಸಾಯಿಲ್ ಇರುವಾಗಲೂ ಕೂಡ ಅಂಥಲ್ಲಿ ಎನ್‌ಕರೇಜ್‌ಮೆಂಟ್ ಕೊಡದೇ ಇರುವುದು ತಮ್ಮ ಡ್ಯೂಟಿ ಅಂತ ತಿಳಿದಿದ್ದೀರಾ ? ಅಂಥ ಜಾಗವನ್ನು ಬಿಟ್ಟು ಬೆಟ್ಟದಂತಹ ಜಾಗದಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಾಡಿ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದರಿಂದ ಪ್ರಯೋಜನವಾದರೂ ಏನು ?

ಶ್ರೀ ಬಿ. ರಾಚಯ್ಯ.—ಈಗ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನಲ್ಲಿ ಯಾವುದನ್ನು ತೆಗೆದಿದ್ದೇವೆ ಅದನ್ನು ಬೇರೆ ಇನ್ನೊಂದು ಕಡೆಗೆ ವರ್ಗಾಯಿಸುವುದಕ್ಕಾಗುವುದಿಲ್ಲ. ಆದ್ದರಿಂದ ರಾಯಚೂರು ಜಿಲ್ಲೆಯಂತಹ ಕೃಷಿಗೆ ಸಂಬಂಧಪಟ್ಟ ಯಾವುದೇ ಕಾಲೇಜು ಪ್ರಾರಂಭ ಮಾಡಬೇಕಾದರೂ ಅದಕ್ಕೆ ಅಗತ್ಯವಾಗಿರತಕ್ಕ ಸೌಲಭ್ಯಗಳು ಇದ್ದರೆ ಅಲ್ಲಿ ತೆಗೆಯಬೇಕಾಗುತ್ತದೆ, ಅದಕ್ಕೆ ಅಲ್ಲಿ ಇಂಜನಿಯರಿಂಗ್ ಇನ್‌ಸ್ಟಿಟ್ಯೂಟ್ ತೆಗೆಯಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ.

Mr. SPEAKR.—Questions are over.

QUESTIONS FOR ANSWERS ON THE DAY

(but not taken up)

Equation of the Post of Assistant Surgeons in the Birur General Hosptal

137. Sri K. M. THAMMAIAH (Kadur) :—

Will the Minister for Health be pleased to state.—

(*a*) whether an Assistant Surgeon, grade III, in the general Hospital, Birur, is treated as equal to the Assistant Surgeon Grade I, who is also the Medical Officer and a specialist in Medicine ;

(*b*) whether the Assistant Surgeons (Grade III), are assigned independent beds equal to the number of beds allotted to the Post-graduate Medical Officer, they are not supposed to work under the Medical Officer ?